# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಮುನಿರಾಜು ಗೌಡ ಪಿ.ಎಂ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **245** |
| **ಉತ್ತರಿಸಬೇಕಾದ ದಿನಾಂಕ** | : | **14.12.2021** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ಪ್ಯಾಕ್ಸ್) ಸ್ಥಾಪನೆಗೆ ನಿಗಧಿಪಡಿಸಲಾಗಿರುವ ಮಾನದಂಡಗಳೇನು; ಸದರಿ ಸಂಘ ಸ್ಥಾಪನೆಗೆ ಅನುಮತಿ ನೀಡುವ ಅಧಿಕಾರ ಇರುವ ಸಕ್ಷಮ ಪ್ರಾಧಿಕಾರಯವುದು; | ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಸಿಆರ್‌ಡಿ/ಕೆಎಂಸಿ-04/179/2016-17, ದಿನಾಂಕ:12-05-2017 ಮತ್ತು ಸುತ್ತೋಲೆ ಸಂಖ್ಯೆ:ಆರ್‌ಸಿಎಸ್/ ಸಿಆರ್‌ಡಿ/ಸಿಎಬಿ-2/30/2020-21, ದಿನಾಂಕ:24-06-2020 ರಲ್ಲಿ ಪ್ರತಿಗ್ರಾಮ ಪಂಚಾಯಿತಿಗೆ ಒಂದರಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಲು ಈ ಕೆಳಕಂಡ ಮಾನದಂಡಗಳನ್ನು ವಿಧಿಸಲಾಗಿರುತ್ತದೆ.<br>1) ಪ್ರತಿ ಸಂಘವು ಕನಿಷ್ಟ 4000 ಎಕರೆ ಸಾಗುವಳಿ ಭೂಮಿಯನ್ನು ಹೊಂದಿರಬೇಕು.<br>2) ಸಂಘದ ಕಾರ್ಯ ಕ್ಷೇತ್ರವು ಕೇಂದ್ರ ಸ್ಥಾನದಿಂದ ಕನಿಷ್ಟ 05 ಕಿ.ಮೀ ಪರಿಧಿಯನ್ನು ಹೊಂದಿರಬೇಕು.<br>3) ಕನಿಷ್ಟ 600 ರೈತ ಕುಟುಂಬವನ್ನು ಹೊಂದಿರುವ ಗ್ರಾಮಗಳಾಗಿರಬೇಕು.<br>4) ಒಂದು ಗ್ರಾಮವನ್ನು ಒಂದೇ ಸಂಘದ ವ್ಯಾಪ್ತಿಗೆ ಬರುವಂತೆ ನೋಡಿಕೊಳ್ಳತಕ್ಕದ್ದು.<br>5) ಒಂದು ಗ್ರಾಮ ಪಂಚಾಯ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಬೇಕಾದ ಪ್ರಸ್ತಾವೆಗಳು ಬಂದರೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯುವುದು.<br>6) ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಸಮಾಪನೆಗೊಂಡಿದ್ದು, ನೋಂದಣಿ ರದ್ದುಗೊಂಡಿದ್ದಲ್ಲಿ ಮಾತ್ರ ಅಂತಹ ಸಂಘದ ವ್ಯಾಪ್ತಿಯಲ್ಲಿ ಹೊಸ ಸಂಘವನ್ನು ನೋಂದಣಿ ಮಾಡಿ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸತಕ್ಕದ್ದು.<br>ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 6 ಮತ್ತು 7 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ನಿಯಮ 3ಎ, 3ಬಿ ರನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಅಧಿಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಒ/71/ಸಿಎಲ್‌ಎಂ/2016 ದಿನಾಂಕ:06.12.2016 ರೀತ್ಯಾ ವ್ಯಾಪ್ತಿಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಪ್ರತ್ಯಾಯೋಜಿತವಾಗಿರುತ್ತದೆ. |

| | | |
|---|---|---|
| ಆ | ಸರ್ಕಾರದಿಂದ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸದೇ ಮತ್ತು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಹಲವಾರು ಜಿಲ್ಲೆಗಳಲ್ಲಿ ಇತ್ತೀಚೆಗೆ ಅಕ್ರಮವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ರಚನೆ ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಘವಾರು ವಿವರ ನೀಡುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪವಿಭಾಗ, ಶಿರಸಿ ಇವರು ಯಲ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಂಘದ ಕಾರ್ಯವ್ಯಾಪ್ತಿಗೆ ಒಳಪಡುವ ಚಂದಗುಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಶ್ರೀ ಸಿದ್ಧಿ ವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಚಂದಗುಳಿ, ಯಲ್ಲಾಪುರ ತಾಲ್ಲೂಕು ಹಾಗೂ ನಂದೊಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿಯೋಜಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂದೊಳ್ಳಿ, ಯಲ್ಲಾಪುರ ತಾಲ್ಲೂಕು ಈ ಎರಡೂ ಸಹಕಾರ ಸಂಘಗಳು ಸಾಕಷ್ಟು ಕೃಷಿ ಭೂಮಿ ಮತ್ತು ರೈತ ಕುಟುಂಬಗಳನ್ನು ಹೊಂದಿಲ್ಲದೇ ಇದ್ದರೂ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯದೇಸುತ್ತೋಲೆಯ ನಿರ್ದೇಶನಗಳನ್ನು ಉಲ್ಲಂಘಿಸಿ ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಿರುತ್ತಾರೆ. |
| ಇ | ಹಾಗಿದ್ದಲ್ಲಿ, ಸದರಿ ಅಕ್ರಮ ಪ್ಯಾಕ್ಸ್‌ಗಳ ನೋಂದಣಿ ರದ್ದು ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಶ್ರೀ ಸಿದ್ಧಿ ವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಚಂದಗುಳಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂದೊಳ್ಳಿ, ಈ ಸಹಕಾರ ಸಂಘಗಳ ನೋಂದಣಿ ಸಿಂಧುತ್ವ ಪ್ರಶ್ನಿಸಿ ಯಲ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ರವರು ಗೌ॥ ಉಚ್ಛ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ:104197/2021ನ್ನು ದಾಖಲಿಸಿದ್ದು ಮಾನ್ಯ ನ್ಯಾಯಪೀಠವು ದಿನಾಂಕ:13-12-2021ರ ಆದೇಶದನ್ವಯ ಯಲ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಯಲ್ಲಾಪುರ ರವರು, ಶ್ರೀ ಸಿದ್ಧಿ ವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಚಂದಗುಳಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂದೊಳ್ಳಿ, ಈ ಸಹಕಾರ ಸಂಘಗಳ ನೋಂದಣಿಯ ಸಿಂಧುತ್ವವನ್ನು ಪ್ರಶ್ನಿಸುವ ಅಧಿಕಾರ ಇಲ್ಲವೆಂದು ಆದೇಶಿಸಿ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ.<br>ಗೌ॥ ಉಚ್ಛ ನ್ಯಾಯಾಲಯ, ಧಾರವಾಡ ಪೀಠದ ದಿನಾಂಕ:13-12-2021ರ ಆದೇಶದಲ್ಲಿ ಸರ್ಕಾರದ ವಿರುದ್ಧ ಪ್ರತಿಕೂಲ ಆದೇಶವಾಗಿಲ್ಲವಾದುದರಿಂದ ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ದಾಖಲಿಸಲು ಅರ್ಹ ಪ್ರಕರಣವಲ್ಲವೆಂದು ಗೌ॥ ಉಚ್ಛ ನ್ಯಾಯಾಲಯದ ಸರ್ಕಾರಿ ವಕೀಲರು ದಿನಾಂಕ:14-01-2022ರ ಪತ್ರದಲ್ಲಿ ತಿಳಿಸಿರುವ ಮೇರೆಗೆ ಸದರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೋಂದಣಿ ರದ್ದುಪಡಿಸುವ ಪ್ರಮೇಯ ಉದ್ಭವಿಸುವುದಿಲ್ಲ. |
| ಈ | ಸದರಿ ಅಕ್ರಮ ಪ್ಯಾಕ್ಸ್‌ಗಳ ರಚನೆಗೆ ಸಹಕರಿಸಿದ ಅಧಿಕಾರಿ/ಸಿಬ್ಬಂದಿ ವರ್ಗಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಯಲ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಂಘದ ಕಾರ್ಯವ್ಯಾಪ್ತಿಯಲ್ಲಿ ನೋಂದಣಿ ಮಾಡಿರುವ ಶ್ರೀ ಸಿದ್ಧಿ ವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಚಂದಗುಳಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂದೊಳ್ಳಿ ಈ ಎರಡು ಸಹಕಾರ ಸಂಘಗಳ ನೋಂದಣಿ ರದ್ದುಗೊಳಿಸುವಂತೆ ಹಾಲಿ ಇರುವ |

| | | |
|---|---|---|
| | | ಯಲ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘರವರು ಕೋರಿದ್ದ ಪ್ರಯುಕ್ತ ಸಹಕಾರ ಸಂಘಗಳ ಉಪನಿಬಂಧಕರು, ಕಾರವಾರ ಜಿಲ್ಲೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪವಿಭಾಗ, ಶಿರಸಿ ಇವರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ.<br>ಸಹಕಾರ ಸಂಘಗಳ ಉಪನಿಬಂಧಕರು, ಕಾರವಾರ ಜಿಲ್ಲೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪವಿಭಾಗ, ಶಿರಸಿ ಇವರು ನೋಟೀಸ್‌ಗೆ ಸಮಜಾಯಿಷಿ ನೀಡಿದ್ದು, ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ಸಿಒ 358 ಸಿಎಲ್‌ಎಸ್ 2021**

ಎಸ್.ಟಿ. ಸೋಮಶೇಖರ್

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**